2) ಶಿರಸ್ತೇದಾರ್ ಹುದ್ದೆಗಳನ್ನು ಪ್ರದಸ ಹಾಗೂ ರಾಜಸ್ವ ನಿರೀಕ್ಷಕ ಹುದ್ದೆಗಳಿಂದ ಶೇ.95 ಹಾಗು ಶೇ.5 ರಷ್ಟನ್ನು ಶೀಘ್ರಲಿಪಿಗಾರರಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತದೆ.

3) ದ್ವಿ.ದ.ಸ ವೃಂದಕ್ಕೆ ಶೇ.75 ರಷ್ಟು ನೇರ ನೇಮಕಾತಿ ಮೂಲ ಹಾಗೂ ಶೇ.25 ರಷ್ಟು ವಾಹನ ಚಾಲಕರು – ಡಿ ದರ್ಜೆ ನೌಕರರಿಂದ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು.

4) ಗ್ರೂಪ್–ಡಿ ಹುದ್ದೆಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ನೇಮಕಾತಿ ಪ್ರಾಧಿಕಾರಿಗಳಾಗಿರುತ್ತಾರೆ. ಈ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳ ಪಟ್ಟಿ ಪಡೆದು ನೇಮಕ ಮಾಡುತ್ತಾರೆ.

1306 (1795) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ):– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಹಣವೆಷ್ಟು;

ಆ) ವಿವಿಧ ಯೋಜನೆಗೆ ಬಿಡುಗಡೆ ಮಾಡಲಾದ ಹಣವೆಷ್ಟು?

ಶ್ರೀ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 2005–06ನೇ ಸಾಲಿನಲ್ಲಿ ಎಲ್ಲ ಯೋಜನೆಗಳನ್ನು ಸೇರಿಸಿ ಒಟ್ಟು ರೂ.50.974 (ಲಕ್ಷದಲ್ಲಿ) ಹಣ ಬಿಡುಗಡೆಯಾಗಿದೆ.

ಆ) 2005–06ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಲಾದ ಹಣ ಕೆಳಗಿನಂತಿದೆ.

ಕ್ರಸಂ.	ಯೋಜನೆಯ ಹೆಸರು	ಬಿಡುಗಡೆ ಮಾಡಲಾದ ಹಣವೆಷ್ಟು (ಲಕ್ಷದಲ್ಲಿ)
1.	ಎಸ್.ಜೆ.ಆರ್.ವೈ 20% (ಜಿ.ಪಂ)	21.068
2.	ಎಸ್.ಜೆ.ಆರ್.ವೈ 30% (ತಾ.ಪಂ)	
	1. ಧಾರವಾಡ	3.000
	2. ಹುಬ್ಬಳ್ಳಿ	3.481
	3. ನವಲಗುಂದ	3.920
	4. ಕುಂದಗೋಳ	1.494
	5. ಕಲಘಟಗಿ	1.600
3.	ಎಸ್.ಜೆ.ಆರ್.ವೈ. 50% (ಗ್ರಾ.ಪಂ)	0.305
4.	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	3.860
5.	ವನಸಂವರ್ಧನೆ ಯೋಜನೆ	
	1. ಧಾರವಾಡ	0.877
	2. ಹುಬ್ಬಳ್ಳಿ	0.508
	3. ಕಲಘಟಗಿ	0.696
	4. ಕುಂದಗೋಳ	0.605
6.	ಜೆ.ಬಿ.ಐ.ಸಿ.	9.560
	ಒಟ್ಟು	**50.974**

1307 (1796) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳ ಬರ ಪೀಡಿತ ಎಂದು ಘೋಷಿಸಲಾಗಿದೆ;